## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
## ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ.

## ಅಪರಾದ ಪ್ರಕರಣ ಸಂಖ್ಯೆ 658/2021

**ಚಾಸಾಃ 2 ಪ್ರಾಸಾಃ 2**

ಹೆಸರು : ಅಬ್ಬಾಸ್

ತಂದೆಯ ಹೆಸರು : ದಿ. ಮಹಮ್ಮದ್

ಪ್ರಾಯ : 52 ವರ್ಷ

ಉದ್ಯೋಗ : ಕೋಳಿ ವ್ಯಾಪಾರ

ವಾಸ : ಪಿಲ್ಯಾ ಗ್ರಾಮ, ಬೆಳ್ತಂಗಡಿ ತಾಲೂಕು

ದಿನಾಂಕ 28-5-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅ. ರವರಿಂದಃ

ಆರೋಪಿಗಳ ಪರಿಚಯ ಇರುತ್ತದೆ. ಚಾಸಾ-1 ನನ್ನ ಹೆಂಡತಿ, ಚಾಸಾ-3 ನನ್ನ ಮಗಳು. ಚಾಸಾ-3 ರವರನ್ನು ಕುವೆಟ್ಟು ಗ್ರಾಮದ 1 ನೇ ಆರೋಪಿಗೆ 8 ವರ್ಷಗಳ ಹಿಂದೆ ಮದುವೆ ಮಾಡಿಕೊಟ್ಟಿದ್ದು ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಮದುವೆಯಾದಾಗಿನಿಂದಲೂ ಸಹ 1 ನೇ ಆರೋಪಿ ಚಾಸಾ-3 ರವರಿಗೆ ಚಿತ್ರಹಿಂಸೆ ಕೊಡುತ್ತಿದ್ದು 8 ವರ್ಷಗಳ ನಂತರ ಅದು ಹೆಚ್ಚಾಗಿರುತ್ತದೆ. ನಂತರ ನಾವು ವಕೀಲರ ಮೂಲಕ ನಮ್ಮ ಮುಸ್ಲಿಂ ಧರ್ಮದಂತೆ ವಿಚ್ಛೇದನ ತಲಾಕ್ ಮಾಡಿಸಿರುತ್ತೇವೆ. ಸದರಿ ತಲಾಕ್ ನಲ್ಲಿ 15 ದಿನಗಳಿಗೊಮ್ಮೆ 1 ನೇ ಆರೋಪಿಗೆ ಮಕ್ಕಳನ್ನು ತೋರಿಸಬೇಕೆಂಬ ಒಪ್ಪಂದವಾಗಿದ್ದು ಅದರಂತೆ 15 ದಿನಗಳಿಗೊಮ್ಮೆ 1 ನೇ ಆರೋಪಿಗೆ ಅವರ ಮಕ್ಕಳನ್ನು ತೋರಿಸುತ್ತಿದ್ದು ಈಗಿರುವಾಗ ದಿನಾಂಕ 31-8-2020 ರಂದು ಸಂಜೆ 5 ಗಂಟೆಗೆ 1 ನೇ ಆರೋಪಿ ಮಕ್ಕಳನ್ನು ನೋಡಲು ಬಂದಿದ್ದು 1 ನೇ ಆರೋಪಿ ನನ್ನನ್ನು ಉದ್ದೇಶಿಸಿ ಬೇವರ್ಸಿ ಸೂಳೆ ಮಗ ಎಂದು ಹೇಳಿ ಕುತ್ತಿಗೆಯನ್ನು ಹಿಡಿದು ನನಗೆ ದೊಣ್ಣೆಯಿಂದ ಹೊಡೆದ ಕಾರಣ ಬಲ ಎದೆ ಮತ್ತು ಬಲಗಾಲಿಗೆ ಪೆಟ್ಟಾಗಿರುತ್ತದೆ. 1 ನೇ ಆರೋಪಿ ತಾನು ಬಂದಿದ್ದ ಕೆಎ 41 ಬಿ 2625 ನೇ ಇಂಡಿಕಾ ಕಾರನ್ನು ನನ್ನ ಮೇಲೆ ಹತ್ತಿಸಲು ಪ್ರಯತ್ನಿಸಿದ್ದು ಆಗ ಚಾಸಾ-1 ರವರು ಓಡಿ ಬಂದಿದ್ದು ಆಗ 1 ನೇ ಆರೋಪಿಯು ಬೇವರ್ಸಿ ಸೂಳೆ ಮಗನೇ ನಿನ್ನನ್ನು ಕೊಲ್ಲದೆ ಬಿಡುವುದಿಲ್ಲವೆಂದು ಬೆದರಿಕೆ ಹಾಕಿ ಅಲ್ಲಿಂದ ಕಾರಿನಲ್ಲಿ ಹೊರಟು ಹೋಗಿರುತ್ತಾರೆ.

ನಂತರ ನಾನು ವೇಣೂರು ಪೊಲೀಸ್ ಠಾಣೆಗೆ 1 ನೇ ಆರೋಪಿ ವಿರುದ್ಧ ದೂರು ನೀಡಲು ಹೋದಾಗ ಆರೋಪಿಗಳು ನಮ್ಮ ಮನೆಗೆ ಬಂದು ಚಾಸಾ-1 ರವರನ್ನು ಉದ್ದೇಶಿಸಿ ಸೂಳೆ ಮಗ ನಿನ್ನ ಗಂಡ ಎಲ್ಲಿ ಅವನನ್ನು ಮತ್ತು ನಿಮ್ಮನ್ನು ಸಾಯಿಸದೆ ಬಿಡುವುದಿಲ್ಲ ಎಂದು ಹೇಳಿ ಚಾಸಾ-1 ರವರಿಗೆ ಹಲ್ಲೆ ಮಾಡಿರುತ್ತಾರೆ. ಈ ಹಲ್ಲೆಯಿಂದ ಚಾಸಾ-1 ರವರ ಬಲ ಎದೆ ಮತ್ತು ಬಲಗಾಲಿಗೆ ಪೆಟ್ಟಾಗಿರುತ್ತದೆ. 4 ನೇ ಆರೋಪಿ ಮನೆಯ ಹೊರಗಿನಿಂದ ನಮ್ಮ ಮನೆಯ ಕಿಟಕಿಯ ಗಾಜುಗಳಿಗೆ ಕಲ್ಲು ಬಿಸಾಡಿದ್ದು ಕಿಟಕಿ ಗಾಜುಗಳು ಪುಡಿಯಾಗಿರುತ್ತವೆ, ಇದ್ದರಿಂದ 50 ರೂ ನಷ್ಟ ಉಂಟಾಗಿರುತ್ತದೆ. ನಂತರ ಚಾಸಾ-1 ರವರನ್ನು ಚಾಸಾ-4 ರವರು ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮಕ್ಕಳನ್ನು ತೋರಿಸುವ ವಿಚಾರದಲ್ಲಿ ಈ ತಕ್ಷೀರು ನಡೆದಿರುತ್ತದೆ. ನಾನು ಠಾಣೆಗೆ ಹೋಗಿ ನಂತರ ಆಸ್ಪತ್ರೆಗೆ ಹೋಗಿರುತ್ತೇನೆ. ಘಟನೆ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಗಳು ನಮ್ಮ ಮನೆಗೆ ಬಿಸಾಡಿದ ಕಲ್ಲುಗಳು ಮತ್ತು ಹುಡಿಯಾದ ಗಾಜಿನ ಚೂರುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-1 ರಿಂದ 3 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಪಿ ಎಂ ವಕೀಲರಿಂದಃ</u>

ಚಾಸಾ-4 ನನ್ನ, ಚಾಸಾ-6 ಮತ್ತು 7 ನಮ್ಮ ನೆರೆಕೆರೆಯವರು. ಚಾಸಾ-3 ಮತ್ತು 1 ನೇ ಆರೋಪಿಯ ವಿಚ್ಛೇದನ ಕರಾರು ಯಾವ ದಿನಾಂಕ ಆಗಿರುತ್ತದೆಂದು ನೆನಪಿರುವುದಿಲ್ಲ. ವಿಚ್ಛೇದನವಾಗುವ 2 ತಿಂಗಳ ಪೂರ್ವದಲ್ಲಿ ಅವರು ಬೇರೆ ಬೇರೆಯಾಗಿದ್ದರು. ವಿಚ್ಛೇದನ ಕರಾರನ್ನು ಉಪ್ಪಿನಂಗಡಿಯ ವಕೀಲರು ಮಾಡಿರುತ್ತಾರೆ, ಅವರು ಹೆಸರು ನೆನಪಿರುವುದಿಲ್ಲ. ವಿಚ್ಛೇದನ ಕರಾರು ಮಾಡಲು 1 ನೇ ಆರೋಪಿಯೇ ವಕೀಲರಿಗೆ ಮಾಹಿತಿ ನೀಡಿರುತ್ತಾರೆ. ವಿಚ್ಛೇದನ ಕರಾರಿಗೆ ಚಾಸಾ-3 ಮತ್ತು 1 ನೇ ಆರೋಪಿ ಒಪ್ಪಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ವಿಚ್ಛೇದನ ಕರಾರಿಗೆ ಸಾಕ್ಷಿದಾರರಾಗಿ ರಜಾಕ್ ಮತ್ತು ಇನ್ನೊಬ್ಬರು ಸಾಕ್ಷಿದಾರರಾಗಿ ಸಹಿ ಮಾಡಿದ್ದು ಅವರ ಹೆಸರು ನೆನಪಿರುವುದಿಲ್ಲ. ವಿಚ್ಛೇದನ ಕರಾರಿನ ಪ್ರಕಾರ 1 ನೇ ಆರೋಪಿ ಚಾಸಾ-3 ರವರಿಗೆ ರೂ. 4 ಲಕ್ಷ ಗಳನ್ನು ಪಾವತಿ ಮಾಡಿರುತ್ತಾರೆ. ವಿಚ್ಛೇದನ ಕರಾರಿನ ಪ್ರಕಾರ 1 ನೇ ಆರೋಪಿಗೆ ಮಕ್ಕಳನ್ನು ನಮ್ಮ ಮನೆಯ ಗೇಟಿನ ಹತ್ತಿರ ತೋರಿಸಿ ವಾಪಸ್ಸು ಕರೆದುಕೊಂಡು

ಬರುತ್ತಿದ್ದೆವು. ತಕ್ಷೀರಿಗೂ ಪೂರ್ವದಲ್ಲಿ ಅಂದಾಜು 10 ಭಾರಿ ಮಕ್ಕಳನ್ನು ತೋರಿಸಿರುತ್ತೇವೆ. ಮಕ್ಕಳನ್ನು ನೋಡಲು 1 ನೇ ಆರೋಪಿ ಒಬ್ಬರೇ ಬರುತ್ತಿದ್ದರು. ತಕ್ಷೀರು ದಿನ ಬೆಳಗ್ಗೆ ಆರೋಪಿ ಕೆಎ 41 ಬಿ 2625 ಕಾರಿನಲ್ಲಿ ಬಂದಿದ್ದರು ಎಂದು ಪೊಲೀಸರಿಗೆ ಹೇಳಿರುತ್ತೇನೆ, ನಂತರ ನಮ್ಮ ಮನೆಗೆ ಆರೋಪಿಗಳು ಬರುವಾಗ ಯಾವ ಕಾರಿನಲ್ಲಿ ಬಂದಿದ್ದರು ಎಂದು ಗೊತ್ತಿರುವುದಿಲ್ಲ ಕಾರಣ ಆ ಸಮಯ ನಾನು ವೇಣೂರು ಪೊಲೀಸ್ ಠಾಣೆಗೆ ದೂರು ನೀಡಲು ಹೋಗಿದ್ದೆ.

1 ನೇ ಆರೋಪಿ ಪ್ರಥಮವಾಗಿ ನಮ್ಮ ಮನೆಗೆ ಬಂದಾಗ ನಾನು ಗೇಟಿನ ಎಡ ಭಾಗದಲ್ಲಿದ್ದೆ, ಸದರಿ ಗೇಟು ಯಾವಗಲು ತೆರೆದಿರುತ್ತದೆ. ಮಗುವನ್ನು ತೋರಿಸುವ ಪೂರ್ವದಲ್ಲೆ ಗಲಾಟೆಯಾಗಿರುತ್ತದೆ. ಈ ವಿಚಾರವನ್ನು ಪೊಲೀಸರಿಗೆ ಹೇಳಿದ ಬಗ್ಗೆ ನೆನಪಿರುವುದಿಲ್ಲ. 1 ನೇ ಆರೋಪಿ ನನಗೆ ಹೊಡೆಯುವ ಸಮಯ ಮಗು ಮನೆಯ ಒಳಗೆ ಇತ್ತು, ನಾನು ಮಗುವನ್ನು ತೋರಿಸಲು ಮನೆಯ ಹೊರಗೆ ಕರೆದುಕೊಂಡು ಬಂದಿರಲಿಲ್ಲ. ನಾನು ಗೇಟಿನ ಹೊರಗೆ ಗೊಬ್ಬರದ ಲೋಡಿನ ಬಳಿ ಬೈಕಿನ ಮೇಲೆ ಕುಳಿತಿದ್ದಾಗ 1 ನೇ ಆರೋಪಿ ಮತ್ತು ನನಗೆ ಮಾತಿಗೆ ಮಾತು ಬೆಳೆದಿರುತ್ತದೆ. 1 ನೇ ಆರೋಪಿ ಮಕ್ಕಳನ್ನು ನೋಡಲು ಬರುತ್ತಿದ್ದೇನೆಂದು ಕರೆ ಮಾಡಿದ ನಂತರ ಮನೆಗೆ ಬಂದಿರುತ್ತಾರೆ. 10 ಭಾರಿ ಮಗುವನ್ನು ನೋಡಲು ಬಂದಾಗಲು ಸಹ 1 ಆರೋಪಿಯನ್ನು ನಮ್ಮ ಮನೆಯ ಒಳಗೆ ಸೇರಿಸಿರುವುದಿಲ್ಲ. ವಿಚ್ಚೇದನ ಕರಾರಿನಲ್ಲಿ ಮಗುವನ್ನು ಮನೆಯ ಹೊರಗೆ ತೋರಿಸಬೇಕೆಂಬ ಷರತ್ತು ಇರಲಿಲ್ಲ. ಗಲಾಟೆಯ ಸಮಯದಲ್ಲಿ ಆದ ಉರುಳಾಟದಿಂದ ನನ್ನ ಬಟ್ಟೆಗೆ ಮಣ್ಣು ಮೆತ್ತಿರಬಹುದು ಆದರೆ ಈಗ ನೆನಪಿರುವುದಿಲ್ಲ. ಈ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಪೊಲೀಸರು ನನ್ನ ಬಟ್ಟೆಗಳನ್ನು ವಶಕ್ಕೆ ಪಡೆದಿರುವುದಿಲ್ಲ. ನನಗೆ ಹಲ್ಲೆ ಮಾಡಿದ ದೊಣ್ಣೆಯನ್ನು ಪೊಲೀಸರು ವಶಪಡಿಸಿಕೊಂಡಿರುವುದಿಲ್ಲ. ದೊಣ್ಣೆಯಿಂದ ನನ್ನ ಎದೆಗೆ ಮತ್ತು ಕಾಲಿಗೆ ಹಲ್ಲೆ ಮಾಡಿದ ಬಗ್ಗೆ ಪೊಲೀಸರಿಗೆ ಹೇಳಿರುತ್ತೇನೆ.

1 ನೇ ಆರೊಪಿ 2 ನೇ ಬಾರಿಗೆ ಉಳಿದ ಆರೋಪಿಗಳೊಂದಿಗೆ ನಮ್ಮ ಮನೆಗೆ ಬಂದಿದ್ದಾರೆಂಬ ವಿಚಾರ ಚಾಸಾ-1 ರವರು ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ ಖುದ್ದಾಗಿ ನೋಡಿರುವುದಿಲ್ಲ. ಖುದ್ದಾಗಿ ನೋಡದ ಕಾರಣ ಆ ಸಮಯ ಏನೆಲ್ಲಾ ಆಗಿರುತ್ತದೆಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನನಗೆ ಹಲ್ಲೆ ನಡೆಸಿದ ಬಗ್ಗೆ ನಾನು ಪ್ರತ್ಯೇಕ ದೂರು

ನೀಡಿರುತ್ತೇನೆ, ನಂತರ ನನಗೆ ಮನೆಯಿಂದ ಕರೆ ಬಂದ ಕಾರಣ ಎರಡೂ ತಕ್ಷೀರಿಗೂ ಸೇರಿ ಒಂದೇ ಪ್ರಕರಣವನ್ನು ದಾಖಲಿಸಿರುತ್ತಾರೆ. ಪೊಲೀಸರು ತಕ್ಷೀರು ಸ್ಥಳದಿಂದ ಒಂದು ಹಿಡಿಯಷ್ಟು ಗಾಜಿನ ಚೂರಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಕಿಟಕಿ ಗಾಜು ಎಷ್ಟು ಚೂರುಗಳಾಗಿ ಹುಡಿಯಾಗಿರುತ್ತದೆಂದು ನೆನಪಿರುವುದಿಲ್ಲ. ಅಳದಂಗಡಿಯಲ್ಲಿ ಸರ್ಕಾರಿ ಆಸ್ಪತ್ರೆ ಇರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 3 ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಮಹಜರ್ ಸಮಯ ನಾನು ತಕ್ಷೀರು ಸ್ಥಳದಲ್ಲಿದ್ದೆನು, ಮಹಜರಿಗೆ ಸಹಿ ಮಾಡಿದ ಬಗ್ಗೆ ನೆನಪಿರುವುದಿಲ್ಲ. ಮಹಜರ್ ಸಮಯ ಚಾಸಾ-1, 3 ರವರು ಇದ್ದರು ಮತ್ತು ಉಳಿದವರು ಯಾರೆಲ್ಲ ಇದ್ದರು ಮತ್ತು ಎಷ್ಟು ಜನ ಇದ್ದರು ಎಂದು ನೆನಪಿರುವುದಿಲ್ಲ. ಸರಿಯಾಗಿ ನೆನಪಿಲ್ಲದ ಕಾರಣ ಅಂದಾಜಿನ ಮೇಲೆ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-3 ಮತ್ತು 1 ನೇ ಆರೋಪಿಯ ನಡುವೆ ಆದ ಕರಾರಿನ ಷರುತ್ತುಗಳನ್ನು ತಪ್ಪಿಸುವ ಸಲುವಾಗಿ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣ ದಾಖಲಾದ 2 ತಿಂಗಳ ನಂತರ 1 ನೇ ಆರೋಪಿಗಳು ಮಕ್ಕಳನ್ನು ತೋರಿಸಿರುತ್ತೇನೆ. ಚಾಸಾ-3 ರವರಿಗೆ ಪ್ರಸ್ತುತ ಮರು ಮದುವೆಯಾಗಿರುತ್ತದೆ. ಚಾಸಾ-3 ರವರ ಮಕ್ಕಳ ಪೈಕಿ ಒಂದು ಗಂಡು ಮಗು ನನ್ನ ಬಳಿ ಹಾಗೂ ಮತ್ತೊಂದು ಹೆಣ್ಣು ಮಗು ಚಾಸಾ-3 ರವರ ಬಳಿ ಇರುತ್ತವೆ. ಗಂಡು ಮಗುವಿಗೆ ಆರೋಗ್ಯದ ಸಮಸ್ಯೆಯಾಗಿತ್ತು ಎಂದರೆ ಸರಿಯಲ್ಲ. ಹೆಣ್ಣು ಮಗುವಿಗೆ ಆರೋಗ್ಯ ಸಮಸ್ಯೆಯಿಂದ 25 ದಿನಗಳ ಕಾಲ ತುರ್ತು ಚಿಕಿತ್ಸಾ ಘಟನದಲ್ಲಿ ಚಿಕಿತ್ಸೆಗೆ ದಾಖಲಾಗಿರುತ್ತದೆ. ಆ ಸಮಯ ನಾನು, ಚಾಸಾ-3 ರವರು ಮಗುವನ್ನು ನೋಡಿಕೊಳ್ಳುತ್ತಿದ್ದೆವು.

ಗಂಡು ಮಗುವನ್ನು ಪಿಲ್ಯಾದ ಆಂಗ್ಲ ಮಾಧ್ಯಮ ಶಾಲಗೆ ಸೇರಿಸಿರುತ್ತೇವೆ. ಗಂಡು ಮಗವನ್ನು ಸರಿಯಾಗಿ ಶಾಲೆಗೆ ಕಳುಹಿಸುತ್ತಿಲ್ಲವೆಂದು 1 ನೇ ಆರೋಪಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ನೀಡಿದ ಬಗ್ಗೆ ನನಗೆ ತಿಳಿದಿರುತ್ತದೆ. ಸದರಿ ದೂರಿನ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳು ನಮ್ಮ ಮನೆಗೆ ಬಂದು ವಿಚಾರಣೆ ಮಾಡಿದ್ದು ಅವರಿಗೆ ಸೂಕ್ತ ದಾಖಲೆಗಳನ್ನು ನೀಡಿರುತ್ತೇನೆ. ವಿಚ್ಚೇದನ ಕರಾರಿನ ಪ್ರಕಾರ ಮಗುವನ್ನು ನೋಡಲು 1 ನೇ ಆರೋಪಿಯು ಬಂದ ಸಮಯವನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮಗುವನ್ನು ನೋಡಲು ತಡೆಯೊಡ್ಡಿದ ಕಾರಣದ ಮೇಲೆ ಅದೇ ದಿನ ನನ್ನ

ವಿರುದ್ಧ ಕೂಡ ಪ್ರಕರಣ ದಾಖಲಿಗಿರುತ್ತದೆ ಎಂದರೆ ಆಗಿರಬಹುದು. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯ ಮೇಲಿನ ದ್ವೇಷದಿಂದ ಈ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆಳರಚ್ಚು ಮಾಡಲಾಯಿತು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ.ಗಳು ಬೆಳ್ತಂಗಡಿ.

**(ಸಾ. ಓ. ಹೇ. ಕೇ. ಸ. ಇ. ಎ. ಒ.)**